ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿ ಸಂಖ್ಯೆ

3315 -ಶ್ರೀ ಪಿ.ಸಿ. ಸಿದ್ದನಗೌಡ (ಕಲಘಟಗಿ) :ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂಧಿ ವರ್ಗದ ಸಂಖ್ಯೆ ಎಷ್ಟು? (ವಿವಿಧ ವರ್ಗದ ನೌಕರರ ಬಗ್ಗೆ ಪ್ರತ್ಯೇಕ ವಿವರಗಳನ್ನು ನೀಡುವುದು.

ಆ) ಇವರುಗಳಿಗೆ ಸಂಬಳ ಮತ್ತು ಇತರ ಭತ್ಯೆಗಳಿಗಾಗಿ ಪ್ರತೀ ವರ್ಷ ವೆಚ್ಚವಾಗುತ್ತಿರುವ ಹಣ ಎಷ್ಟು?

ಇ) ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ಬೇನಾಮಿ ನೌಕರರು ಕೆಲಸ ನಿರ್ವಹಿಸುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ?

ಈ) ಹಾಗಿದ್ದಲಿ ಇಮವರೆಗೂ ಅಂತಹ ಎಷ್ಟು ಜನರು ಈ ಪ್ರಕರಣದಲ್ಲಿ ಸಿಕ್ಕಿದ್ದಾರೆ

ಉ) ಸರ್ಕಾರ ಆ ರೀತಿಯ ಬೇನಾಮಿ ನೌಕರರುಗಳನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ 55,445 (ಪಾಯಂ) ಕಾರ್ಯ ನಿರ್ವಹಿಸುತ್ತಿದ್ದಾರೆ. ವಿವಿಧ ವರ್ಗಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು ವಿವರ ಈ ಕೆಳಕಂಡಂತಿದೆ.

ವರ್ಗ	ಕಾರ್ಯನಿರ್ವಾಹಿಸುತ್ತಿರುವ ಸಿಬಂದ್ಧಿ ಸಂಖ್ಯೆ
ದರ್ಜೆ-1	226
ದರ್ಜೆ-2	232
ದರ್ಜೆ-3	47,296
ದರ್ಜೆ-4	7.691
ಒಟ್ಟು	55.445

ಆ) 1989-90 ಒಟ್ಟು 149,24 ಕೋಟಿ ರೂ.ಗಳನ್ನು ನೌಕರರಿಗೆ ಸಂಬಳ ಮತ್ತು ಭತ್ಯೆ ಗಳಿಗಾಗಿ ಕೊಡಲಾಗಿದೆ.

ಇ) ಗಮನಿಸಿದೆ.

ಈ) ಒರ್ವ ವ್ಯಕ್ತಿ ಪ್ರಕರಣದಲ್ಲಿ ಸಿಲುಕಿದ್ದಾರೆ.

ಉ) ಸಂಸ್ಥೆಯ ಭದ್ರತಾ ಮತ್ತು ಜಾಗ್ರತಾಧಿಕಾರಿ ಇಲಾಖೆಯು ವಿಭಾಗ ಅಧೀಕಾರಿಗಳಿಗೆ ಹಾಗೂ ಭದ್ರತಾ ನೀರಿಕ್ಷಕರುಗಳಿಗೆ ಈ ಬಗ್ಗೆ ನೀಗಾವಹಿಸಿ ಅಂತಹ ಪ್ರಕರಣಗಳನ್ನು ಸಂಸ್ಥೆಯ ಗಮನಕ್ಕೆ ತಂದು ಸಂಭಂದಪಟ್ಟವರ ಮೇಲೆ ವರದಿಗಳನ್ನು ಕೊಡಲು ಆದೇಶಿಸಿದೆ.

ಹುಬ್ಬಳ್ಳಿ -ಧಾರವಾಡದಲ್ಲಿ ಮಹಿಳಾ ಪದವಿ ಕಾಲೇಜುಗಳ ಪ್ರಾರಂಭ.

3314 - ಶ್ರೀ ಪಿ. ಸಿ. ಸಿದ್ದಗೌಡ (ಕಲಘಟಗಿ): ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಧಾರವಾಡ ನಗರದಲ್ಲಿ ಮಹಿಳಾ ಪದವಿ ಕಾಲೇಜುಗಳನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೆ?

ಆ) ಹಾಗಿದ್ದಲ್ಲಿ ಯಾವಾಗ ಈ ಕಾಲೇಜುಗಳನ್ನು ಪ್ರಾರಂಭಿಸಲಾಗುವುದು?

ಇ) ಸರ್ಕಾರದ ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಯಾವುದಾದರೂ ಯೋಜನಗಳನ್ನು ರೂಪಿಸಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ಈ ದಿಶೆಯಲ್ಲಿ ಯಾವುದೇ ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸಕಲೇಶಪುರ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ

3353 - ಶ್ರೀ ಬಿ. ಆರ್. ಗುರುದೇವ (ಸಕಲೇಶಪುರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಕಲೇಶಪುರ ಪಟ್ಟಣದಲ್ಲಿ ಒಂದೇ ಕಟ್ಟಡದಲ್ಲಿ ಸರ್ಕಾರಿ ಪ್ರೌಢಶಾಲೆ, ಕಿರಿಯ ಕಾಲೇಜು ಮತ್ತು ಪ್ರಥಮ ದರ್ಜೆ ಕಾಲೇಜಿನ ತರಗತಿಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಸದರಿ ಕಟ್ಟಡವು ತುಂಬಾ ಚಿಕ್ಕದಾಗಿದ್ದು ಮತ್ತು ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಪ್ರತ್ಯೇಕವಾದ ಪ್ರಥಮ ದರ್ಜೆ ಕಾಲೇಜಿನ ಕಟ್ಟಡವನ್ನು ಕಟ್ಟಿಸಲು ಸರ್ಕಾರವು ಜರೂರು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳು ಸಚಿವರು) :

ಅ) ಬಂದಿದೆ.

ಆ)ಬಂದಿದೆ.

ಇ) 1991-92ನೇ ಸಾಲಿಗೆ ಈ ಕಾಲೇಜಿನ ಕಟ್ಟಡಕ್ಕಾಗಿ ರೂ. 6.20 ಲಕ್ಷ ಪಣ ಒದಗಿಸಲಾಗಿದೆ. ಇದಕ್ಕೆ ಸಂಬಂಧಪಟ್ಟ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆಲೂರು ಮತ್ತು ಸಕಲೇಶಪುರಕ್ಕೆ ವಿದ್ಯುತ್ ಸರಬರಾಜು ಅಡಚಣೆ.

3345 - ಶ್ರೀ ಬಿ. ಆರ್. ಗುರುದೇವ(ಸಕಲೇಶಪುರ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳು ಮಲೆನಾಡು ಪ್ರದೇಶಗಳಲ್ಲಿದ್ದು ಮಳೆಗಾಲದಲ್ಲಿ ವಿದ್ಯುತ್ ಕಂಬಗಳು ಹಾನಿಗೊಳಗಾಗಿ ಸುಮಾರು 3-4 ತಿಂಗಳುಗಳ ಕಾಲ ವಿದ್ಯುತ್ ಸರಬರಾಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?